ಶ್ರೀ ಸಂಜಯ್ ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇರುವುದು ಹೊಸ ನೇಕಾರರ ಕಾಲೋನಿ ನಿರ್ಮಿಸುವ ಬಗ್ಗೆ ಮತ್ತು ಅವರಿಗೆ ಮೂಲಭೂತ ಸೌಕರ್ಯ ಕೊಡುವುದರ ಬಗ್ಗೆ ಕೇಳುತ್ತಿದ್ದೇನೆ. ಸಚಿವರು ರೂ. 20.00 ಲಕ್ಷ ಅನುದಾನ ಕೊಟ್ಟಿರುವ ಬಗ್ಗೆ ಹೇಳುತ್ತಿದ್ದಾರೆ ಮತ್ತು 3 ಕಡೆಯಷ್ಟೆ ಅನುದಾನ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ, ಹಾಗಾದರೆ ಇಡೀ ಕರ್ನಾಟಕದಲ್ಲಿ ಮೂರೇ ಜಾಗ ಇದೆಯೇನೋ ಎಂದು ಕೇಳುತ್ತಿದ್ದೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, 2011–12 ನೇ ಸಾಲಿನಲ್ಲಿ ಒದಗಿಸಿರುವ ಸೌಲಭ್ಯದ ಬಗ್ಗೆ ಹೇಳಿದರು. ಇವರು ಮಂತ್ರಿಯಾದ ಮೇಲೆ ಏನು ಮಾಡಿದರು ಎಂದು ಹೇಳಲೇ ಇಲ್ಲ.

ಶ್ರೀ ಬಾಬುರಾವ್ ಚಿಂಚನಸೂರ (ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಹೇಳುತ್ತೇನೆ ಕೇಳಿಸಿಕೊಳ್ಳಿ. ಕರ್ನಾಟಕ ರಾಜ್ಯದ 10 ಜಿಲ್ಲೆಗಳಲ್ಲಿ ಒಟ್ಟು 29 ಕಾಲೋನಿಗಳನ್ನು ಅಭಿವೃದ್ಧಿಪಡಿಸಿ 2806 ಮನೆಗಳನ್ನು ನಿರ್ಮಿಸಿ ಅವುಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಬೀದಿ ದೀವಗಳು, ಒಳಚರಂಡಿ ವ್ಯವಸ್ಥೆ, ಪ್ರತಿ ಮನೆಗಳಿಗೆ ವಿದ್ಯುತ್ ಸಂಪರ್ಕ, ನೀರಿನ ಸೌಕರ್ಯ ಹಾಗೂ ಶೌಚಾಲಯಗಳ ಸೌಕರ್ಯಗಳನ್ನು ಒದಗಿಸಲಾಗಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಅಧ್ಯಕ್ಷರು : ಶ್ರೀ ಚೆಲುವರಾಯಸ್ವಾಮಿ, ಇವರ ಗಮನ ಸೆಳೆಯುವ ಸೂಚನೆ ನಾಳೆಗೆ ಇದೆ ಶ್ರೀ ಬೋಪಯ್ಯನವರು ಮಾತನಾಡಿ.

ವಿಷಯ : ಸಹಕಾರ ಇಲಾಖೆಯ ಸುತ್ತೋಲೆ ಸಂಖ್ಯೆ : ಆರ್‌ಸಿಎಸ್.ಸಿ.ಆರ್.ಡಿ.1/,2013–14 ದಿ : 28.08.2014ನ್ನು ಹಿಂಪಡೆಯುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಸುತ್ತೋಲೆ ಸಂಖ್ಯೆ: ಆರ್‌ಸಿಎಸ್. ಸಿಆರ್‌ಡಿ.1. 2013–14 ದಿ:28.08.2014ನ್ನು ಹಿಂಪಡೆಯುವ ಬಗ್ಗೆ ಸನ್ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಉತ್ತರವಿದ್ದರೆ ನನಗೆ ಅದರ ಪ್ರತಿಯನ್ನು ಕೊಡಿ.

ಅಧ್ಯಕ್ಷರು : ಸುತ್ತೋಲೆಯನ್ನು ಹಿಂಪಡೆಯುವುದು ಎಂದು ಕೇಳಿದ್ದಾರೆ, ಉತ್ತರವನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಸುತ್ತೋಲೆಯನ್ನು ಹಿಂಪಡೆಯಬೇಕೆಂದು ಕೇಳಿದ್ದೇನೆ. ಹಿಂಪಡೆದಿದ್ದಾರೆಯೇ ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲಾ ಸಹಕಾರ ಬ್ಯಾಂಕು ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ಮನಃ ರೂ. 25000/- ರವರೆಗಿನ ಸಾಲ ವಿತರಿಸುವ ಸಂದರ್ಭದಲ್ಲಿ, ಬ್ಯಾಂಕು ಶಾಖೆಗಳ ಹಂತದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಾಲ ಬಿಡುಗಡೆ ಮಾಡಿದೆ ಎಂದು ತೋರಿಸಿ, ಅದೇ ದಿನ ವಿತರಿಸಿದ ಒಟ್ಟು ಬೆಳೆ ಸಾಲದ ಮೊತ್ತದಿಂದ ಕಾನೂನು ಬಾಹಿರವಾಗಿ ರೂ.4310.00 ಲಕ್ಷಗಳನ್ನು ಶೇ.5% ರ ಬಡ್ಡಿದರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹೆಸರಿನಲ್ಲಿ 14 ತಿಂಗಳುಗಳ ಅವಧಿಗೆ ನಿಶ್ಚಿತ ಠೇವಣಿ ಎಂದು ಪಡೆದುಕೊಂಡಿರುತ್ತಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ಮೊತ್ತದ ಮೇಲೆ ಶೇ. 3% ರಷ್ಟು ಬಡ್ಡಿಯನ್ನು ಸಂಘಗಳ ಹಂತದಲ್ಲಿ ಉಳಿಸಿಕೊಂಡು ಶೇ. 2% ರ ಬಡ್ಡಿಯನ್ನು ಮಾತ್ರ ರೈತರಿಗೆ ಪಾವತಿಸಿರುವುದಾಗಿ ತಮ್ಮ ರಿಜಿಸ್ಟರ್‌ಗಳಲ್ಲಿ ದಾಖಲಿಸಿರುತ್ತಾರೆ. ಆದರೆ ರೈತರಿಗೆ ನಿಶ್ಚಿತ ಠೇವಣಿಗಳ ಬಾಂಡ್‌ಗಳನ್ನು ನೀಡಿರುವುದಿಲ್ಲ. ಮುಖ್ಯವಾಗಿ ಈ ಅಕ್ರಮದ ಪರಿಣಾಮವಾಗಿ ಸದರಿ ಸಾಲಿನಲ್ಲಿ ಬೆಳೆ ಸಾಲ ಪಡೆಯಲು ಅರ್ಹರಿರುವ ರೈತರಿಗೆ ರೂ. 25000 ರಷ್ಟು ಸಾಲ ವಿತರಿಸಿರುವುದಿಲ್ಲ. ಹೀಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ 17240 ರೈತರಿಗೆ ಕನಿಷ್ಟ ಬೆಳೆ ಸಾಲ ತಲಾ ರೂ. 25000 ರಂತೆ ನೀಡದೇ ಇರುವುದು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು), ಬೆಂಗಳೂರು ಇವರ ವರದಿಯಿಂದ ತಿಳಿದು ಬಂದಿರುತ್ತದೆ.

ಮೇಲಿನ ರೀತಿ ಸಹಕಾರ ಸಂಘಗಳಲ್ಲಿ ರೈತರ ಸಾಲದ ಖಾತೆಗಳಲ್ಲಿ ಖರ್ಚು ತೋರಿಸಿ, ರೈತರಿಗೆ ವಿತರಿಸಿದ ಸಾಲಗಳು ಸದುಪಯೋಗವಾಗದೇ ಇದ್ದರೂ ಸಹ, ಇಲಾಖೆಯ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನವನ್ನು ಕ್ಲೇಮ್ ಮಾಡುವ ಸಂಭವ ಇದ್ದುದರಿಂದ, 2013-14 ನೇ ಸಾಲಿಗೆ ಬಡ್ಡಿ ಸಹಾಯಧನ ಕ್ಲೇಮ್ ಮಾಡಲು ನಮೂನೆಗಳನ್ನು ನೀಡಲು ನಿಬಂಧಕರ ಕಚೇರಿಯಿಂದ ದಿನಾಂಕ: 28/8/2014 ರಂದು ಹೊರಡಿಸಿದ ಸುತ್ತೋಲೆಯಲ್ಲಿ 'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ವಿತರಿಸಿದ ಸಾಲಗಳಿಗೆ ಯಾವುದೇ ಠೇವಣಿಯನ್ನು ಪಡೆದಿದ್ದರೆ ಅಥವಾ ಬೇರೆ ರೀತಿಯಲ್ಲಿ ಈ ಮೊತ್ತ ದುರ್ಬಳಕೆಯಾಗಿದ್ದರೆ, ಅಂತಹ ಮೊತ್ತಗಳಿಗೆ ಬಡ್ಡಿ ಸಹಾಯಧನವನ್ನು ಕ್ಲೇಮ್ ಮಾಡತಕ್ಕದ್ದಲ್ಲ' ಎಂದು ತಿಳಿಸಲಾಗಿತ್ತು.

ಸಾಲ ಪಡೆದ ರೈತರು ಇತರೆ ಮೂಲದಿಂದ ಬಂದ ಆದಾಯದಲ್ಲಿ ಸಂಘಗಳಲ್ಲಿ ಠೇವಣಿ ಇಟ್ಟಿದ್ದರೆ, ರೈತರು ಸಾಲ ಪಡೆಯುವ ಪೂರ್ವದಲ್ಲಿ ಮತ್ತು ನಂತರದ ಅವಧಿಯಲ್ಲಿ ಠೇವಣಿ ಇಟ್ಟಿದ್ದರೆ ಅಂತಹ ಪ್ರಕರಣಗಳಲ್ಲಿಯು ಸಹ ಬಡ್ಡಿ ಸಹಾಯಧನ ಕ್ಲೇಮ್ ಮಾಡುವ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿ ಪ್ರಸ್ತಾವನೆಯು ಬಂದಿರುತ್ತದೆ. ಈ ಬಗ್ಗೆ ನಿಬಂಧಕರ ಕಚೇರಿಯಿಂದ ರೈತರಿಗೆ ಬೆಳೆ ಸಾಲ ನೀಡುವ ಸಮಯದಲ್ಲಿ ರೈತರಿಗೆ ವಾಸ್ತವವಾಗಿ ಸಾಲ ವಿತರಿಸದೇ ಅವರ ಸಾಲದ ಖಾತೆಯಲ್ಲಿ

ಸಾಲ ನೀಡಿದಂತೆ ತೋರಿಸಿ ಒತ್ತಾಯಪೂರ್ವಕವಾಗಿ ಠೇವಣಿ ಪಡೆದಿದ್ದರೆ ಮಾತ್ರ ಅಂತಹ ಸಾಲಗಳ ಮೇಲೆ ಬಡ್ಡಿ ಸಹಾಯಧನ ಕ್ಲೇಮ್ ಮಾಡದೇ ಇರಲು ದಿನಾಂಕ : 7/11/2014ರ ಸುತ್ತೋಲೆಯಲ್ಲಿ ಸ್ಪಷ್ಟೀಕರಣ ನೀಡಲಾಗಿದ್ದು, ಈ ಕುರಿತು ಪುನಃ ಪರಿಶೀಲಿಸಲಾಗುವುದು.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ನಾನು withdraw ಮಾಡುವುದಕ್ಕೆ ಕೇಳಿದಂಥ circular ಬೇರೆ, ಇವರು ಕೊಟ್ಟಿರುವುದೇ ಬೇರೆ. 28–08–2014ರಲ್ಲಿ ಒಂದು ಸುತ್ತೋಲೆಯನ್ನು ರಿಜಿಸ್ಟ್ರಾರ್‌ರವರು ಹೊರಡಿಸಿದ್ದಾರೆ. 2013–14 ನೇ ಸಾಲಿನಲ್ಲಿ ಶೂನ್ಯ ಮತ್ತು 1%ರ ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳು ರೈತರಿಗೆ ವಿತರಿಸಿದ ಅಲ್ಪಾವಧಿ ಕೃಷಿ ಸಾಲಗಳ ವಸೂಲಾತಿ ಆಧಾರದ ಮೇಲೆ ಬಡ್ಡಿ, ಸಹಾಯಧನದ ಕ್ಲೈಮು, ಬಿಲ್‌ಗಳನ್ನು ಪಾವತಿಸುವ ಬಗ್ಗೆ ಎಂದು ಕೊಟ್ಟಿದ್ದಾರೆ. ಇದರಲ್ಲಿ ಅವರು ಏನು ಹೇಳಿದ್ದಾರೆಂದರೆ, ಯಾರಾದರೂ ರೈತರು ಸಾಲ ತೆಗೆದುಕೊಂಡು ಸ್ವಲ್ಪ ದುಡ್ಡನ್ನು deposit ಮಾಡಿದ್ದರೆ, ಆ ಸೊಸೈಟಿಯವರು ಕ್ಲೇಮು ಕಳುಹಿಸುವಾಗ deposit amount ನ್ನು less ಮಾಡಿ ಕಳುಹಿಸಬೇಕು. ಆ deposit ನ್ನು ಕಷ್ಟಕ್ಕೆ ಇಟ್ಟುಕೊಂಡರೆ ಅದಕ್ಕೆ ಇವರು ಬಡ್ಡಿರಹಿತ ಸಾಲದ facility ಏನಿದೆ, ಅದು ಇಲ್ಲ ಎಂದು ಹೇಳಿದ್ದಾರೆ. ನಮೂನೆ–1 ಕೊಟ್ಟಿದ್ದಾರೆ. ಕಷ್ಟಕ್ಕೆ ರೈತರು ಆ ಸೊಸೈಟಿಯಲ್ಲಿ deposit ಇಡಬಾರದೇ ?

ಅಧ್ಯಕ್ಷರು : ಬಡ್ಡಿ ರಹಿತ ಸಾಲ ತೆಗೆದುಕೊಂಡು ಅದನ್ನು deposit ಇಟ್ಟುಕೊಳ್ಳುತ್ತೇವೆಂದರೆ ಅದು misuse ಅಲ್ಲವೇ ?

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಜೂನ್‌ನಲ್ಲಿ ಸಾಲ ಮಂಜೂರು ಮಾಡುತ್ತಾರೆ. ನವೆಂಬರ್–ಡಿಸೆಂಬರ್‌ಗೆ ಆಗುವಾಗ ಹಣ ಬೇಕಾಗುತ್ತದೆ.

ಅಧ್ಯಕ್ಷರು : ಬೋಪಯ್ಯನವರೆ, ಇದು ಬಹಳ simple, ಬಡ್ಡಿ ರಹಿತ ಸಾಲ ಕೊಟ್ಟಾಗ deposit ಮಾಡಿ ಇಟ್ಟುಕೊಂಡರೆ ಅದು misuse ಮಾಡಿದಂತೆ ಆಗುವುದಿಲ್ಲವೇ ?

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ರೈತರು ಬುದ್ದಿವಂತಿಕೆಯಿಂದ ತನ್ನ ಸಾಲ ತಗೊಂಡು deposit ಮಾಡಿ ಇಟ್ಟರೆ ಬಡ್ಡಿ ರಹಿತ ಸಾಲವೇ ?

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಹಾಗಾದರೆ ದೊಡ್ಡ ಮನುಷ್ಯರಿಗೆ ಮಾತ್ರ ಸಾಲವೇ ? ಕಷ್ಟಕಾಲಕ್ಕೆ ಒಂದಿಷ್ಟು ದುಡ್ಡನ್ನು ಇಟ್ಟರೆ, ಇವರು 3 ಲಕ್ಷ ರೂಪಾಯಿಗಳವರೆಗೆ ಸಾಲ ಕೊಡುತ್ತಾರೆ. claim form ನಲ್ಲಿ ಅದನ್ನು Less ಮಾಡಿ ಕೊಡಿ ಎಂದರೆ ಇದು ಯಾವ ನ್ಯಾಯ ?

ಅಧ್ಯಕ್ಷರು: ಸಾಕು ಚರ್ಚೆಗೆ ಅವಕಾಶವಿಲ್ಲ. ಏನು ಹೇಳುತ್ತೀರೋ, ಇಲ್ಲವೋ ಎಂದು ಹೇಳಿ.

ಶ್ರೀ ಹೆಚ್.ಎಸ್ ಮಹದೇವಪ್ರಸಾದ್ : ಬಡ್ಡಿ ರಹಿತ ಸಾಲ ಮೂರು ಲಕ್ಷದವರೆಗೆ ಘೋಷಣೆ ಮಾಡಿ ಜಿಲ್ಲಾ ಕೇಂದ್ರ ಬ್ಯಾಂಕುಗಳ ಮುಖಾಂತರ, Banks ಗಳ ಮುಖಾಂತರ ವಿತರಣೆ ಮಾಡಲಾಗುತ್ತಿದೆ. ಆ ಬಡ್ಡಿ ರಹಿತ ಸಾಲವನ್ನು ಅದೇ ದುಡ್ಡನ್ನು 25 ಸಾವಿರ 50 ಸಾವಿರ ಈ ರೀತಿ ಅದೇ ಬ್ಯಾಂಕಿನಲ್ಲಿ deposit ಇಟ್ಟು interest ಪಡೆಯುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿಲ್ಲ. ಆ ಹಣ ರೈತರು ವ್ಯವಸಾಯಕ್ಕೆ ಬಳಸಬೇಕೆಂಬುದು ನಮ್ಮ ಮೂಲ ಉದ್ದೇಶ.

ಅಧ್ಯಕ್ಷರು : ಅವರು ಹೇಳಿರುವ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೀರೋ, ಇಲ್ಲವೋ ಹೇಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮೊನ್ನೆ ಮಡಿಕೇರಿಗೆ ಹೋಗಿದ್ದ ಸಂದರ್ಭದಲ್ಲಿ ಈ ರೀತಿ deposit ಇಟ್ಟಿರುವುದನ್ನು ನೀವು ಸಾಲಕ್ಕೆ ಬಳಸಬೇಕೆಂದು ಮಾಡಿದರೆ ಬ್ಯಾಂಕ್‌ಗಳಿಗೆ ನಷ್ಟವಾಗುತ್ತದೆ. ಬ್ಯಾಂಕ್ ವ್ಯವಹಾರ ನಡೆಯುವುದು ಕಷ್ಟವಾಗುತ್ತದೆಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಒಂದು ಕೆಲಸ ಮಾಡಿ. Interest free loan ಕೊಡುತ್ತೀರಲ್ಲ, ಅದನ್ನು deposit ಇಟ್ಟುಕೊಳ್ಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಅದು ಸರಿಯಿಲ್ಲವೆಂದು ನಾನು ಹೇಳಿರುವುದು. ಅದನ್ನು ಅವರು deposit ಇಟ್ಟುಕೊಳ್ಳಲು allow ಮಾಡಿ ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು : ಇದನ್ನು ಪರಿಶೀಲನೆ ಮಾಡಿ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಇದು ಹೇಗಾಗಿದೆ ಎಂದರೆ, claim form ಕಳುಹಿಸಿ ಆಗಿದೆ. ಈಗ ದುಡ್ಡು ಕೊಡುವುದಿಲ್ಲವೆಂದರೆ ಆ ಸೊಸೈಟಿಗಳು ಮುಳುಗಿ ಹೋಗುತ್ತವೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ತಮ್ಮ ಜೊತೆ ಮಾತನಾಡಿದ್ದೇವೆ. ನಿಮ್ಮ ಬೇಡಿಕೆ ಪರಿಶೀಲನೆಯಲ್ಲಿದೆ, ಅದನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಈಗ ಶ್ರೀಮತಿ ವಿನೀಶಾ ನೆರೋ ರವರು.

3. ವಿಷಯ: ಬೆಂಗಳೂರಿನ ಕಾಕ್ಸ್‌ಟೌನ್ ಮಾರುಕಟ್ಟೆಯನ್ನು ಸ್ಥಳಾಂತರಿಸುವ ಬಗ್ಗೆ ಮತ್ತು ಬೆಂಗಳೂರಿನಲ್ಲಿನ 11 ಮಾರುಕಟ್ಟೆಗಳಲ್ಲಿ ಅಗತ್ಯ ಸೌಲಭ್ಯ ಒದಗಿಸುವ ಬಗ್ಗೆ.

ಶ್ರೀಮತಿ ವಿನಿಶಾ ನೆರೋ (ನಾಮನಿರ್ದೇಶಿತರು) : ಮಾನ್ಯ ಅಧ್ಯಕ್ಷರೆ, Chief Minister, I would like to address for nearly 12 years, coxtown market has not